ಆ) ಹಾಗಿದ್ದಲ್ಲಿ ಸರ್ಕಾರದ ಈ ತೀರ್ಮಾನವನ್ನು ಕಾರ್ಯಗತಗೊಳಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಈ) ರಾಜ್ಯದ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿಯೂ ಈ ಸೌಲಭ್ಯಗಳನ್ನು ಒದಗಿಸಲಾಗುವುದೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಇತ್ತೀಚಿನ ಇಂಧನ ಹಾಗೂ ಡೀಸೆಲ್ ಬೆಲೆಗಳ ಹೆಚ್ಚಳದಿಂದ ಈ ಸೌಲಭ್ಯಗಳನ್ನು ಒದಗಿಸಲಾಗುವುದಿಲ್ಲ.

ಶಿಗ್ಗಾಂವ ಪಿ.ಹೆಚ್.ಸಿ.ಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ

558. ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ಪಿ.ಹೆಚ್.ಸಿ.ಯನ್ನು ಅಪ್‌ಗ್ರೇಡ್ ಮಾಡಿ 6 ಹಾಸಿಗೆಗಳಿಂದ 30 ಹಾಸಿಗೆಗಳವರೆಗೆ ಹೆಚ್ಚಿಸಲು ಸರ್ಕಾರದವರ ಉದ್ದೇಶವೇನಾದರೂ ಇದೆಯೇ?

ಆ) ಹಾಗಿದ್ದಲ್ಲಿ ಇನ್ನೂ ಎಷ್ಟು ದಿವಸಗಳಲ್ಲಿ ಸದರಿಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು):–

ಅ) ಭಾರತ ಜನಸಂಖ್ಯಾ ಯೋಜನೆ–3 (ಕರ್ನಾಟಕ)ರ ಯೋಜನೆಯಲ್ಲಿ ಶಿಗ್ಗಾಂವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲಾಗಿದೆ.

ಆ) ಕಟ್ಟಡ ಪೂರ್ಣಗೊಂಡ ಕೂಡಲೆ.

ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ನೇಸರ್ಗಿ ಗ್ರಾಮದಲ್ಲಿ ವೈದ್ಯಾಧಿಕಾರಿಗಳನ್ನು ನೇಮಿಸುವ ಬಗ್ಗೆ

544. ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನೇಸರ್ಗಿ ಗ್ರಾಮದಲ್ಲಿ ಹಳೇ ಟಿ.ಡಿ.ಬಿ. ಹೆರಿಗೆ ಆಸ್ಪತ್ರೆ ಇದ್ದುದು ನಿಜವೇ?

ಆ) ಈ ಹೆರಿಗೆ ಆಸ್ಪತ್ರೆಗೆ ಒಬ್ಬ ವೈದ್ಯಾಧಿಕಾರಿಯನ್ನು (ಆನ್ ಡೆಪ್ಯುಟೇಷನ್) ಎರವಲು ಸೇವೆಯ ಮೇಲೆ ನೇಮಿಸಬೇಕೆಂದು ಸರ್ಕಾರದವರು ಆದೇಶ ನೀಡಿದ್ದು ನಿಜವೇ? ಮತ್ತು ಆದೇಶ ಹೊರಡಿಸಿದ ದಿನಾಂಕವಾವುದು?

ಇ) ಸರ್ಕಾರಿ ಆದೇಶದ ಪ್ರಕಾರ ಜೆ.ಡಿ. ಬೆಳಗಾಂ ಇವರು ಅಲ್ಲಿ ಒಬ್ಬ ಮೆಡಿಕಲ್ ಆಫೀಸರನ್ನು ಡೆಪ್ಯುಟೇಷನ್ ಮೇಲೆ ಪೋಸ್ಟಿಂಗ್ ಮಾಡಿದ ಸಂಗತಿ ನಿಜವೇ? ಅವರು ಎಷ್ಟು ದಿವಸ ಕಾರ್ಯ ನಿರ್ವಹಿಸಿದರು?

ಈ) ಈಗ ಆ ದವಾಖಾನೆಯಲ್ಲಿ ಯಾವುದೇ ವೈದ್ಯಾಧಿಕಾರಿಗಳು ಇಲ್ಲದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಸದರಿ ಸ್ಥಳದಲ್ಲಿ ಒಬ್ಬ ವೈದ್ಯಾಧಿಕಾರಿಯನ್ನು ತುಂಬಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?

ಊ) ಬೆಳಗಾಂನಲ್ಲಿರುವ ಜಿಲ್ಲಾ ವೈದ್ಯಾಧಿಕಾರಿಯವರ ಬಳಿ ಹೆಚ್ಚಿಗೆ ಇರುವವರ ಪೈಕಿ ಒಬ್ಬರನ್ನು ಓ.ಓ.ಡಿ. ಮೇಲೆ ಇಲ್ಲಿ ಪೋಸ್ಟಿಂಗ್ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು):–

ಅ) ನಿಜ

ಆ) ದಿನಾಂಕ 21–8–88ರಂದು ವಿಭಾಗೀಯ ಸಹ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಳಗಾವಿ ಇವರು ಹೊರಡಿಸಿದ್ದಾರೆ.

ಇ) ನಿಜ. ಸ್ವಲ್ಪ ಕಾಲದವರೆಗೆ ಕಾರ್ಯ ನಿರ್ವಹಿಸಿದ್ದಾರೆ.

ಈ) ಬಂದಿದೆ.

ಉ) ಸದರೀ ಸ್ಥಳಕ್ಕೆ ಒಬ್ಬ ವೈದ್ಯರ ಹುದ್ದೆಯನ್ನು ಮಂಜೂರು ಮಾಡಿ ಹುದ್ದೆ ತುಂಬುವ ಕುರಿತು ಪರಿಗಣಿಸಲಾಗುವುದು.

ಊ) ಪರಿಶೀಲನೆಯಲ್ಲಿದೆ.

ಬ್ಲಡ್ ಬ್ಯಾಂಕ್ ಬಗ್ಗೆ ಡಾ। ಕೃಷ್ಣಭಾರ್ಗವ ನೇತೃತ್ವದ ಸಮಿತಿಯು ನೀಡಿದ್ದು, ವರದಿಯನ್ನು ಕಾರ್ಯಗತಗೊಳಿಸುವುದು

556. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಕ್ತ ನಿಧಿಗಳ ಬಗ್ಗೆ ಡಾ। ಕೃಷ್ಣಭಾರ್ಗವ ನೇತೃತ್ವದ ಸಮಿತಿಯು ತನ್ನ ವರದಿಯನ್ನು ಎಂದು ಸರ್ಕಾರಕ್ಕೆ ನೀಡಿತು.

ಆ) ಈ ವರದಿಯ ಮುಖ್ಯಾಂಶಗಳೇನು?

ಇ) ಹಾಗಿದ್ದಲ್ಲಿ ಈ ವರದಿಯನ್ನು ಜಾರಿಗೊಳಿಸಲು ಸರ್ಕಾರ ಇದುವರೆವಿಗೆ ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯವರು):–

ಅ) 18–09–1989

ಆ) ರಕ್ತನಿಧಿ ಕೇಂದ್ರಗಳನ್ನು ಸಮರ್ಪಕವಾಗಿ ಹಾಗೂ ವ್ಯವಸ್ಥಿತ ಹತೋಟಿಯಲ್ಲಿ ತರಲು ಸಮಿತಿಯು ಶಿಫಾರಸ್ಸು ಮಾಡಿದೆ. ಇದಲ್ಲದ ಆರೋಗ್ಯದಾಯಕವಾದ ರಕ್ತವನ್ನು ಅರ್ಹದಾನಿಗಳಿಂದಲೇ ಶೇಖರಿಸುವುದನ್ನು ಖಾತರಿಪಡಿಸಿಕೊಳ್ಳುವ ಬಗ್ಗೆ ಮತ್ತು ರಕ್ತ ನಿಧಿ ಕೇಂದ್ರಗಳಲ್ಲಿ ಇರಬೇಕಾದ ಕನಿಷ್ಟ ಸೌಲಭ್ಯಗಳ ಬಗ್ಗೆ ಸಹಾ ಶಿಫಾರಸ್ಸು ನೀಡಿದೆ.

ಇ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರ ನೇತೃತ್ವದಲ್ಲಿ ಒಂದು ಉಪ ಸಮಿತಿಯನ್ನು ರಚಿಸಲಾಗಿದ್ದು, ಡಾ। ಭಾರ್ಗವ ಸಮಿತಿ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಮಾರ್ಗದರ್ಶನಗಳನ್ನು ರಚಿಸಲು ಸೂಚಿಸಲಾಗಿದೆ. ಸದರಿ ಸಮಿತಿಯು ವರದಿಯನ್ನು ಸದ್ಯದಲ್ಲೇ ಸಲ್ಲಿಸುವ ನಿರೀಕ್ಷೆ ಇದೆ.